


# ಜೆಮಿನಿ: ಇಮೇಜ್‌ಗೆ ಹೊಸ ಭಾಷ್ಯ

ಗೂಗಲ್‌ನ ಜೆಮಿನಿ ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನವು ಇಮೇಜ್‌ಗಳಿಗೆ ಹೊಸ ಭಾಷ್ಯ ಬರೆದಿದ್ದು, ಬಳಕೆದಾರರ ಮೂಲ ಇಮೇಜ್‌ಗಳನ್ನು ತಮ್ಮ ಕಲ್ಪನೆಗೆ ತಕ್ಕಂತೆ ಜನರೇಟ್ ಮಾಡಬಹುದಾಗಿದೆ.

■ ಶಶಿಕುಮಾರ್ ಸಿ.

ಟೇಬಲ್ ಮೇಲೊಂದು ಕಂಪ್ಯೂಟರ್, ಅದರ ಮುಂದೊಂದು ವೃತ್ತಾಕಾರದ ಪ್ಲಾಸ್ಟಿಕ್, ಮೇಲೊಂದು ವ್ಯಕ್ತಿಯೊಬ್ಬರ ನೈಜ ಫೋಟೊ ಕಟೌಟ್. ಪಕ್ಕದಲ್ಲೊಂದು ಪ್ರಿಂಟೆಡ್ ಬಾಕ್ಸ್, ಅದರ ಮೇಲೂ ಕಟೌಟ್‌ನ 3ಡಿ ಚಿತ್ರ. ಇವುಗಳೆಲ್ಲವನ್ನೂ ಒಂದೇ ಇಮೇಜ್‌ನಲ್ಲಿ ಊಹಿಸಿಕೊಳ್ಳಿ... ಇಂತಹ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಈಚೆಗೆ ಟ್ರೆಂಡ್ ಆಗುತ್ತಿವೆ. ಎಲ್ಲರ ಸ್ಟೇಟಸ್‌ನಲ್ಲಿ ರಾರಾಜಿಸುತ್ತಿವೆ.

ಅಷ್ಟಕ್ಕೂ ಇಂತಹ ಚಿತ್ರಗಳನ್ನು ಜನರೇಟ್ ಮಾಡಲು ಅವಕಾಶ ಕಲ್ಪಿಸುತ್ತಿರುವುದು ಗೂಗಲ್‌ನ ಜೆಮಿನಿ ಎಐ. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ 'ಜೆಮಿನಿ ಎಐ' ಗೂಗಲ್‌ನ ಬ್ರಹ್ಮಾಸ್ತ್ರ. ಚಾಟ್‌ಜಿಪಿಟಿ, ಡೀಪ್‌ಸೀಕ್, ಗ್ರೋಕ್‌ನಂತಹ ಕೃತಕ ಬುದ್ಧಿಮತ್ತೆ ಪ್ಲಾಟ್‌ಫಾರ್ಮ್‌ಗಳಿಗೆ ಸೆಡ್ಡು ಹೊಡೆಯುತ್ತಿರುವ ಜೆಮಿನಿ ಎಐ, ತನ್ನ 'ಇಮೇಜ್ ಜನರೇಟ್' ವಿಭಾಗದಲ್ಲಿ ಈಚೆಗೆ ಹೊಸ ಎಡಿಟಿಂಗ್ ಮಾದರಿಯನ್ನು ಪರಿಚಯಿಸಿದೆ. ಗೂಗಲ್‌ನ ಡೀಪ್‌ಮೈಂಡ್ ಭಾಗವಾಗಿರುವ ಈ ಮಾದರಿಯಲ್ಲಿ ಮೂಲ ಫೋಟೊವನ್ನು ನಾನಾ ಕಲ್ಪನೆಗಳಲ್ಲಿ ಪರಿವರ್ತಿಸಬಹುದಾಗಿದ್ದು, ಇದಕ್ಕೆ 'ನ್ಯಾನೊ ಬನಾನ' ಎಂದು ಹೆಸರಿಟ್ಟಿದ್ದಾರೆ.

ಗೂಗಲ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರ್ ಪಿಚ್ಚೈ ಬಾಳೆಹಣ್ಣಿನ ಚಿತ್ರವನ್ನಷ್ಟೇ ಪೋಸ್ಟ್ ಮಾಡಿ ಕುತೂಹಲ ಹುಟ್ಟುಹಾಕಿದ್ದರು. ಅದರ ಭಾಗವಾಗಿಯೇ ಈ ಇಮೇಜ್ ಎಡಿಟಿಂಗ್ ಮಾದರಿಯನ್ನು ಪರಿಚಯಿಸಲಾಗಿದ್ದು, ಇದು ಈ ವರೆಗಿನ ಉತ್ಕೃಷ್ಟ ಇಮೇಜ್ ಎಡಿಟಿಂಗ್ ಮಾದರಿ ಅನ್ನೋದು ಗೂಗಲ್‌ನ ವಾದ.

ಈ ವರ್ಷದ ಪ್ರಾರಂಭದಲ್ಲಿ ಜೆಮಿನಿ ಎಐನಲ್ಲಿ 'ನೇಟಿವ್ ಇಮೇಜ್ ಎಡಿಟಿಂಗ್' ಫೀಚರ್ ಪರಿಚಯಿಸಿತ್ತು. ಆಗಿಂದಲೂ ಈ ಫೀಚರ್‌ನಲ್ಲಿ ಹಲವಾರು ಅಪ್‌ಗ್ರೇಡ್ ಮಾಡುತ್ತಾ ಬಂದಿದ್ದು, ಇದಕ್ಕೆ ನ್ಯಾನೊ ಬನಾನ ಹೊಸ ಟ್ರೆಂಡ್ ಹುಟ್ಟುಹಾಕಿದೆ. ಇನ್ನು ಗೂಗಲ್ ಈ ಫೀಚರ್‌ನಲ್ಲಿ, ಮೂಲ ಇಮೇಜ್ ಅನ್ನು ಧ್ಯೇಯವಾಗಿಟ್ಟುಕೊಂಡು ಅದನ್ನು ಹೇಗೆಲ್ಲಾ ಪರಿವರ್ತಿಸಿ ಜನರೇಟ್ ಮಾಡಬಹುದು ಎಂಬುದರ ಬಗ್ಗೆ ದೃಷ್ಟಿಹರಿಸಿದೆ.

ಬಳಕೆದಾರರು ತಮ್ಮ ಅಥವಾ ತಮಗೆ ಚೆನ್ನಾಗಿ ಗೊತ್ತಿರುವವರ ಚಿತ್ರಗಳನ್ನು ಎಡಿಟ್ ಮಾಡುವಾಗ ಸೂಕ್ಷ್ಮ ನ್ಯೂನತೆಗಳು ಎದುರಾಗುತ್ತವೆ. ಅವುಗಳು ಚಿತ್ರದ ಅಂದವನ್ನು ಹದಗೆಡಿಸುತ್ತವೆ. ಮೂಲ ಚಿತ್ರಕ್ಕೂ ಎಡಿಟ್ ಮಾಡಿದ ಚಿತ್ರ ಹಾಗೂ ಚಿತ್ರದಲ್ಲಿನ ಕೆಲ ಬ್ಯಾಕ್‌ಗ್ರೌಂಡ್, ಆ್ಯಂಬಿಯೆಂಟ್‌ಗೆ ಸಾಮ್ಯತೆಯೇ ಇರುವುದಿಲ್ಲ. ಇದನ್ನು ಮನಗಂಡು ಗೂಗಲ್ ಈ ಫೀಚರ್ ಪರಿಚಯಿಸಿದ್ದು, ಇದು ಮೂಲ ಚಿತ್ರವನ್ನು ಧ್ಯೇಯವಾಗಿಟ್ಟುಕೊಂಡು ಚಿತ್ರವನ್ನು ಇನ್ನಷ್ಟು ಚೆಂದಗೊಳಿಸಲು ಸಹಾಯಕ.

ಈ ಹೊಸ ಇಮೇಜ್ ಎಡಿಟಿಂಗ್ ಟೂಲ್ ಅನ್ನು ಉಚಿತ ಮತ್ತು ಪಾವತಿ ಆಧಾರದ ಮೇಲೆ ಯಾರು ಬೇಕಾದರೂ ಬಳಸಬಹುದು. ಜೆಮಿನಿ ಎಐನಲ್ಲಿ ರಚಿಸಿದ ಮತ್ತು ಎಡಿಟ್ ಮಾಡಿದ ಎಲ್ಲ ಚಿತ್ರಗಳಲ್ಲೂ ಇವು ಎಐನಿಂದ ರಚಿಸಿದ ಹಾಗೂ ಸಂಪಾದಿಸಿದ ಚಿತ್ರಗಳೆಂದು ಸ್ಪಷ್ಟವಾಗಿ ಗೋಚರಿಸಲು 'ಜೆಮಿನಿ ಎಐ ವಾಟರ್‌ಮಾರ್ಕ್' ಇದ್ದೇ ಇರುತ್ತದೆ.

## ಇಮೇಜ್ ಜನರೇಟ್ ಮಾಡುವುದು ಹೇಗೆ?

- ಗೂಗಲ್ ಎಐ ಸ್ಟುಡಿಯೊ ಅಥವಾ ಜೆಮಿನಿ ಎಐಗೆ ಆ್ಯಪ್ ಅಥವಾ ವೆಬ್‌ಸೈಟ್ ಮೂಲಕ ಲಾಗಿನ್ ಆಗಿ.
- ಜೆಮಿನಿ ಎಐನಲ್ಲೂ ಉಚಿತ ಆವೃತ್ತಿ ಲಭ್ಯವಿದ್ದು, ಇದನ್ನೇ ಆಯ್ದುಕೊಳ್ಳುವುದು ಒಳಿತು. ಹಣ ಪಾವತಿಸಿದ ಆವೃತ್ತಿಯು ಇನ್ನಷ್ಟು ಫೀಚರ್ ಲೋಡೆಡ್ ಆಗಿರುತ್ತವೆ. ಉತ್ಕೃಷ್ಟ ಸೌಲಭ್ಯಗಳು ಲಭ್ಯವಾಗುತ್ತವೆ. ಆಯ್ಕೆ ನಿಮಗೆ ಬಿಟ್ಟದ್ದು.
- ಅಗತ್ಯವಿರುವ ಚಿತ್ರ ಮಾದರಿಯನ್ನು ಆಯ್ದುಕೊಳ್ಳಿ. ಉದಾಹರಣೆಗೆ ಫೋಟೊ ಮತ್ತು ಪ್ರಾಂಪ್ಟ್ ಒನ್ಲಿ, ಫೋಟೊ ಮತ್ತು ಪ್ರಾಂಪ್ಟ್ ರೆಕಮೆಂಡೆಡ್ ಮೆಥಡ್‌
- ನಿಮ್ಮ ಚಿತ್ರವನ್ನು ಅಪ್‌ಲೋಡ್ ಮಾಡಿ.
- ಅಪ್‌ಲೋಡ್ ಮಾಡಿದ ಚಿತ್ರವನ್ನು ಯಾವ ರೀತಿ ಪರಿವರ್ತಿಸಬೇಕು ಎಂಬುದನ್ನು ಟೆಕ್ಸ್ಟ್ ಪ್ರಾಂಪ್ಟ್‌ನಲ್ಲಿ ಸ್ಪಷ್ಟವಾಗಿ, ಸೃಜನಾತ್ಮಕವಾಗಿ ಬರೆದು ಎಂಟರ್ ಕೊಡಿ. ಇಂಗ್ಲಿಷ್‌ನಲ್ಲಿದ್ದರೆ ಹೆಚ್ಚು ಪರಿಣಾಮಕಾರಿಯಾಗಿ ಚಿತ್ರ ಪರಿವರ್ತನೆ ಮಾಡಬಹುದು.
- ಕೆಲವೊಂದು ಟೆಕ್ಸ್ಟ್ ಪ್ರಾಂಪ್ಟ್ ಅನ್ನು ಗೂಗಲ್ ಒದಗಿಸಿದ್ದು, ಅದನ್ನು ಬಳಸಿಕೊಂಡು ಚಿತ್ರ ರಚಿಸಬಹುದು. ಟ್ರೆಂಡ್‌ನಲ್ಲಿರುವುದೂ ಇದೇ ಟೆಕ್ಸ್ಟ್ ಪ್ರಾಂಪ್ಟ್ ಮಾದರಿಯ ಚಿತ್ರ.
- ಬಳಿಕ ಜನರೇಟ್ ಬಟನ್ ಒತ್ತಿದರೆ, ಕೆಲ ಸೆಕೆಂಡುಗಳ ಬಳಿಕ ಚಿತ್ರ ನಿಮ್ಮ ಮುಂದೆ ತೆರೆದುಕೊಳ್ಳುತ್ತದೆ.

## ಹೀಗೂ ಮಾಡಬಹುದು

ಚಿತ್ರದಲ್ಲಿನ ವೇಷಭೂಷಣ, ಸ್ಥಳವನ್ನು ಬದಲಾಯಿಸಬಹುದು. ಅದೂ ಕ್ಷಣಾರ್ಧದಲ್ಲಿ. ವಿಭಿನ್ನ ವಸ್ತ್ರಗಳಲ್ಲಿ ಕಂಗೊಳಿಸುವಂತೆ ಮಾಡಬಹುದು. ಮುಂದಿನ ದಶಕದಲ್ಲಿ ನೀವು ಹೇಗೆ ಕಾಣಿಸುತ್ತೀರಿ ಅನ್ನೋದನ್ನೂ ನೋಡಬಹುದು.

ಒಬ್ಬ ವ್ಯಕ್ತಿ ಅಥವಾ ಸಾಕುಪ್ರಾಣಿಯ ಫೋಟೊಗಳನ್ನು ಪ್ರತ್ಯೇಕವಾಗಿ ಅಪ್ಲೋಡ್ ಮಾಡಿ, ಅವೆರಡನ್ನೂ ಒಂದೇ ಚಿತ್ರವನ್ನಾಗಿ ಮಾಡಬಹುದು. ನೀವು ನಾಲ್ಕೈದು ಫೋಟೊಗಳನ್ನು ಒಟ್ಟಿಗೆ ಅಪ್‌ಲೋಡ್ ಮಾಡಿ ಅವುಗಳನ್ನು ಒಟ್ಟಿಗೆ ಸೇರಿಸಿ ಹೊಸ ದೃಶ್ಯವನ್ನು ರಚಿಸಬಹುದು. ಉದಾಹರಣೆಗೆ, ನಿಮ್ಮ ಫೋಟೊ ಮತ್ತು ನಿಮ್ಮ ನಾಯಿಯ ಮತ್ತೊಂದು ಫೋಟೊವನ್ನು ಬಾಸ್ಕೆಟ್‌ಬಾಲ್ ಮೈದಾನದಲ್ಲಿ ಇರುವ ನಿಮ್ಮಿಬ್ಬರ ಪರಿಪೂರ್ಣ ಭಾವಚಿತ್ರವನ್ನು ರಚಿಸಬಹುದು. ■